ಓ ಎಸ್ ನಂಬರ 154/2024
ಪಿ.ಡಬ್ಲ್ಯೂ 1

**ದಿನಾಂಕಃ 11.06.2025.**

**ಸಾಕ್ಷಿ ಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

ಮುಖ್ಯ ವಿಚಾರಣೆಃ ವಾದಿ ಪರ ಶ್ರೀ ಎ ಎಮ್ ಕೆ ವಕೀಲರಿಂದಃ

ನಾನು ಈ ದಾವೆಯಲ್ಲಿ ನಾನು ವಾದಿಯಾಗಿದ್ದು ನನ್ನ ಮುಖ್ಯ ವಿಚಾರಣೆ ಬದಲಿಗೆ ಅಫಿಡೆವಿಟನ್ನು ಸಲ್ಲಿಸಿದ್ದು ಅದರಲ್ಲಿ ಬರೆದಿರುವ ಎಲ್ಲ ವಿಚಾರಗಳು ಸತ್ಯವಾಗಿರುತ್ತವೆ. ಓದಿ ನೋಡಿ ಸಹಿ ಮಾಡಿದ್ದೇನೆ.

ಶಾಲಾ ಪ್ರಮಾಣ ಪತ್ರವನ್ನು ನಿಪಿ **1** ಎಂದು, ಟ್ರಾನ್ಸಪರ್ ಸರ್ಟಿಪಿಕೇಟ್ ನಿಪಿ **2** ಎಂದು, ಆರ್ ಟಿ ಸಿ ಯನ್ನು ನಿಪಿ **3** ಎಂದು ಗುರುತಿಸಲಾಯಿತು.

ಪಾಟೀ **ಸವಾಲುಃ ಶ್ರೀ. ಎ ಜಿ ಪಿ ಅವರಿಂದ**

ನಾನು ಪಿಯುಸಿ ವರೆಗೆ ಶಿಕ್ಷಣ ಮಾಡಿರುತ್ತೇನೆ. ಈ ದಾವೆಯನ್ನು ಹೆಸರು ಸರಿ ಪಡಿಸಲು ಹೂಡಿರುತ್ತೇನೆ. ಈ ದಾವೆಗೆ ಮಾಹಿತಿಯನ್ನು ನಾನೇ ನೀಡಿರುತ್ತೇನೆ. ಪ್ರತಿವಾದಿಗಳು ಸಲ್ಲಿಸಿದ ತಕರಾರನ್ನು ಓದಿ ತಿಳಿದುಕೊಂಡಿರುತ್ತೇನೆ. ನನ್ನ ಹೆಸರನ್ನು ಬಾಬು ಸಾಹೇಬ್ ಹಜರತ್ ಸಾಬ್ ಮುಲ್ಲಾ ಎಂದು ಕರೆಯುತ್ತಾರೆ ಎಂದರೆ ಸಾಕ್ಷಿಯು ಬಾಬುಸಾಬ ಹಜರತ್ ಸಾಬ ಮುಲ್ಲಾ ಎಂದು ಕರೆಯುತ್ತಾರೆ. ಸಾಮಾನ್ಯವಾಗಿ ಶಾಲೆಗೆ ಸೇರಿಸುವ ಸಮಯದಲ್ಲಿ ನಿಮ್ಮ ಪೋಷಕರು ನೀಡಿದ ಮಾಹಿತಿ ಮತ್ತು ದಾಖಲೆಗಳ ಆಧಾರದ ಮೇಲೆ ಹೆಸರನ್ನು ಬರೆದುಕೊಳ್ಳುತ್ತಾರೆ ಎಂದರೆ ಸಾಕ್ಷಿಯು ಹೌದು ನಾವು ಸರಿಯಾಗಿ ಹೇಳಿದರು ಅವರು ತಪ್ಪಾಗಿ ಬರೆದುಕೊಂಡಿರುತ್ತಾರೆ. ಪ್ರತಿವಾದಿಯವರದು ಯಾವುದೇ ತಪ್ಪು ಇರದೇ ಇದ್ದರು ಸಹ ನೀವು ಸುಳ್ಳು ದಾಖಲೆ ಸೃಷ್ಟಿ ಮಾಡಿ ಸುಳ್ಳು ದಾವೆ ಹೂಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ನಾನು ಎಸ್ ಎಸ್ ಎಲ್ ಸಿ **1971** ನೇ ಇಸವಿಯಲ್ಲಿ ಪೂರ್ಣಗೊಳಿಸಿರುತ್ತೇನೆ. ನೀವು ಮುಂದಿನ ತರಗತಿ ಸೇರುವ ಸಮಯಕ್ಕೆ ವರ್ಗಾವಣೆ ಪ್ರಮಾಣ ಪತ್ರ ಹಾಗೂ ಎಸ್ ಎಸ್ ಎಲ್ ಸಿ ಅಂಕಪಟ್ಟಿಯಲ್ಲಿ ಬಾಬು ಸಾಹೇಬ್ ಹಜರತ್ ಸಾಬ್ ಮುಲ್ಲಾ ಎಂದು ನಿಮ್ಮ ಹೆಸರು ಇರುವುದು ಗಮನಕ್ಕೆ ಬಂದಿತ್ತು ಎಂದರೆ ಸರಿಯಲ್ಲ. ನಿಮಗೆ ಸದರಿ ಸಮಯದಲ್ಲಿ ಗಮನಕ್ಕೆ ಬಂದಿದ್ದರು ಸಹ ಬಂದಿಲ್ಲ ಎಂದು ಸುಳ್ಳು ಹೇಳುತ್ತಾ ಇದ್ದೀರಿ ಎಂದರೆ ಸರಿಯಲ್ಲ. ಬಾಬು ಸಾಹೇಬ್ ಹಜರತ್ ಸಾಹೇಬ ಮುಲ್ಲಾರವರೇ ಬೇರೆ ಬಾಬುಸಾಬ ಹಜರತ್

ಸಾಬ ಮುಲ್ಲಾರವರೇ ಬೇರೆ ಎಂದರೆ ಸರಿಯಲ್ಲ. ನಾನು ಕೇಳಿದ ಪರಿಹಾರಕ್ಕೆ ಪಡೆಯಲು ನಾನು ಯೋಗ್ಯ ಅಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

( ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು. )

ಓ. ಹೇ. ಕೇ. ಸರಿ ಇದೆ.

ಹೆಚ್ಚುವರಿ .ನ್ಯಾ. ಮತ್ತು ಪ್ರ.ದ.ನ್ಯಾ. ದಂ. ನ್ಯಾ. ಬೈಲಹೊಂಗಲ